**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 446/2014**

| | | | |
|---|---|---|---|
| **ಹೆಸರು** | : | **ಮಹ್ಮದ ಇಮಾಮ** | **ದೋ.ಸಾ. 7** |
| **ತಂದೆಯ ಹೆಸರು** | : | **ಮಹೆಬೂಬಸಾಬ** | **ಪ್ರಾ.ಸಾ. 4** |
| **ವಯಸ್ಸು** | : | **42 ವರ್ಷ** | **ದಿನಾಂಕಃ 05-06-2023** |
| **ಉದ್ಯೋಗ** | : | **ಗೌಂಡಿ ಕೆಲಸ** | |
| **ವಾಸಸ್ಥಳ** | : | **ಚಂದನಕೇರಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನನಗೆ ಆರೋಪಿತರು ಗೊತ್ತು. ನನಗೆ ಚಾಸಾ-1,ಪ್ರಾಸಾ-2 ಹಾಗೂ ಚಾಸಾ-6 ರಿಂದ ಚಾಸಾ-13 ರವರು ನನಗೆ ಗೊತ್ತು. ನಾನು ಬೆಂಗಳೂರಿನಲ್ಲಿ ವಾಸವಿದ್ದ ಕಾರಣ ನನಗೆ ಈ ಪ್ರಕರಣದ ಬಗ್ಗೆ ಯಾವದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಮತ್ತು ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ದಿನಾಂಕಃ 27-11-2012 ರಂದು ಸಾಯಂಕಾಲ 5.00 ಗಂಟೆ ಸುಮಾರಿಗೆ ನಾನು ಹಾಗೂ ನಮ್ಮ ಗಾರಮದ ಖಾಸಿಂ, ರಾಜು, ಬಸವರಾಜ, ಕೂಡಿ ನಮ್ಮ ಗ್ರಾಮದ ಗ್ರಾಮ ಪಂಚಾಯತ ಭವನದ ಹತಿರ ಇರುವ ಚಂದ್ರಮ್ಮ ದೇವಿ ಗುಡಿಯ ಕಟೆಯ ಮೇಲೆ ಮಾತಾಡುತ ಕುಳಿತಾಗ ಅದೇ ವೇಳೆಗೆ ಪಂಚಾಯತ ಮುಂದಿನಿಂದ ಹೋಗುತಿದ್ದ ಗ್ರಾಮದ ಶಫಿ ದಫೆದಾರ ಇವನಿಗೆ ನಮ್ಮ ಗ್ರಾಮದ ಹಮೀದ ಅವನ ಮಗನಾದ ನಜೀಮ ಹಮೀದನ ಅಣ್ಣನಾದ ಫತ್ತುಸಾಬ ಇನ್ನೂ ಐದು ಜನರು ಕೂಡಿ ಬಂದ ಟವೇರಾ ಕೆಎ-19 ಪಿ. 3423 ನೆದರಲ್ಲಿ ಬಂದು ಪಂಚಾಯತ ಆವರಣದಲ್ಲಿ ನಿಲ್ಲಿಸಿ ಶಫಿಗೆ ಹಮೀನು ಕೇಳಗೆ ಹಾಕಿ ಕೈಯಿಂದ ಹೊಡೆಯುತಿರುವಾಗ ಜಗಳದ ಸಪ್ಪಳ ಕೇಳಿ ಅಲ್ಲಿಗೆ ಬಂದ ಮಕ್ಬುಲ ಇವನಿಗೆ ಫತ್ರುಸಾಬ ಇತನು ಹೊಟ್ಟೆಗೆ ಒದೆಯುತ್ತಿದ್ದ ಉಳಿದವರು ಕೈಯಿಂದ ಶಫಿಯ ಹೊಟ್ಟೆಗೆ, ಬೆನ್ನಿಗೆ ಹೊಡೆಯುತಿರುವಾಗ ಒಬ್ಬನು ಕಲ್ಲಿನಿಂದ ಮಕ್ಬುಲ ಇತನ ಎದಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ಹಮೀದನ ಮಗ ನಜೀಮ ಇತನು ಎ ಮಹ್ಮದ ಜಹೀರ ಓ ತುಮಾರೆ

ಗಾಡಿಮೇ  ರಕೆಸೊ ಜಾಕು ಲೆಕೆ ಆರೆ ಅಂದಾಗ ಆತನು ಜಾಕು  ತೆಗೆದುಕೊಂಡು ಮಕ್ಬುಲ ಇತನಿಗೆ ಹೊಡೆಯಲು ಬರುತಿರುವಾಗ ಆಗ ನಾನು ಹಾಜಗೂ ಖಾಸೀಮ ಬಸವರಾಜ  ಕಡಗದ ಹಾಗೂ ಜಗಳದ ಸದ್ದು ಕೇಳಿ  ಅಲ್ಲಿಗೆ ಬಂದಿದ್ದು ಮೋದಿನ ಶಾಬಶಾ ಕೂಡಿ ಜಗಳ ಬಿಡಿಸುತ್ತಿರುವಾಗ ನಜೀಮ ಇತನು ಮಕ್ಬುಲ ಹಾಗೂ ಶಫಿಗೆ ರಾ೦ ರಂಡಿ ಮಕ್ಕಳಿಗೆ ಹೊಡೆದು ಖಲಾಸ ಮಾಡಬೇಕೆಂದು ಗುಲಬರ್ಗಾದಿಂದ ನನ್ನ ಗೆಳೆಯರಿಗೆ ಕರೆಯಿಸಿದೇನೆ ಎಂದರೆ ಸರಿಯಲ್ಲ. ಹಾಗೆ ಬಿಟ್ಟರೆ  ಹಾಗೆ ಅಂತ ಬೈಯುತಿರುವಾಗ ನಾವೆಲ್ಲರೂ ಸಮಜಾಯಿಸಿ ಕಳುಹಿಸುತಿರುವಾಗ ಫತ್ರುಸಾಬ   ನಜೀಮ ಇವರು ಮಕ್ಬುಲ  ಹಾಗೂ ಶಫಿಗೆ ಇನ್ನೊಮೆ ನಮ್ಮ ತಂಟೆಗೆ ಬಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕುತ್ತಾ ಹೋದರು ಎಂದರೆ ಸರಿಯಲ್ಲ.  ಸದರಿಯವರ ವಾಹನ (ತವೇರಾ) ಅಲ್ಲೆ ನಿಲ್ಲಿಸಿ ಹಮೀದನ ಮನ ಕಡೆಗೆ ಹೋಗಿರುತ್ತಾರೆ ಎಂದರೆ ಸರಯಲ್ಲ.  ಮಹ್ಮದ ಮೋಹಿನ ಅಂತಾ ಗೊತಾಗಿದ್ದು ಇರುತ್ತದೆ. ಸದರಿ ಮಕ್ಬುಲ ಹಾಗೂ ಹಮೀದ ಇವರ ನಡುಗೆ ಉದಾನಿ ಸಲುವಾಗಿ ಬಾಯಿ ಮಾತಿನಿಂದ ಜಗಳವಾಗಿದ್ದು ಅಲ್ಲೆ ಇದ್ದ ಜನರೂ ಇಬ್ಬರಿಗೂ ಸಮಜಾಯಿಸಿ ಕಳುಹಿಸಿದ್ದು  ಇರುತ್ತದೆ ಎಂದರೆ ಸರಿಯಲ್ಲ. ನಂತರ ವಿಷಯ ನಜೀಮ  ಇತನಿಗೆ ಗೊತ್ತಾಗಿ ಗುಲಬರ್ಗಾದಿಂದ ತನ್ನ ಗೆಳೆಯರಿಗೆ ಕರೆದುಕೊಂಡು ಬಂದು ಈ ರೀತಿ ಜಗಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**